ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,
ಸೆಕ್ಟರ್ ನಂ-06, ನವನಗರ, ಬಾಗಲಕೋಟೆ-03
Tel:08354-297330

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, HESCOM, Sector No-06,
Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ:ಅಕಶೆ/ಅಅ(ವಿ)/ಉರೆನಿ/ಸರೆ/ಹಿಸ-1/22-23/ 6013-6017 ದಿನಾಂಕ: 26-8-2022

ಪ್ರಕರಣ ಸಂಖ್ಯೆ:03/2022

ಶ್ರೀ. ಜಡಾಮಲ್ ಮಾಣಿಕಚಂದ
ಪ್ರತಿನಿಧಿ: -------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ನಗರ ಉಪ-ವಿಭಾಗ
ಹುವಿಸಕಂನಿ., ಬಾಗಲಕೋಟೆ -------- ಪ್ರತಿವಾದಿ

ವಿಷಯ: "ವಿದ್ಯುತ್ ದುರುಪಯೋಗ ಮಾಡಿರುವ" ಕುರಿತು.

*&*&*

ಪ್ರಕರಣ ಸಂಖ್ಯೆ:03/2022 ರಕ್ಕೆ ಸಂಬಂಧಿಸಿದಂತೆ, ದಿನಾಂಕ:21-06-2022 ಹಾಗೂ 26.07.2022 ರಂದು ಬೆಳಿಗ್ಗೆ 11.30 ಘಂಟೆಗೆ ಶ್ರೀ ಕಾಶಿನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಹಾಜರಿದ್ದವರು:
1) ಶ್ರೀ. ಎಸ್ ಜಿ ಸಾತಿಹಾಳ, ಪ್ರಭಾರ ಉಪಲೆಕ್ಕನಿಯಂತ್ರಣಾಧಿಕಾರಿ, ಕಾ ಮತ್ತು ಪಾ ವೃತ್ತ ಹೆಸ್ಕಾಂ ಬಾಗಲಕೋಟೆ.
2) ಶ್ರೀ. ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.
3) ಶ್ರೀ. ಅರವಿಂದ ನಾಯ್ಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ.
4) ಶ್ರೀ. ಸಂಜೀವ ಕುಮಾರ ಚಿಕ್ಕಲಕಿ, ಸಹಾಯಕ ಲೆಕ್ಕಾಧಿಕಾರಿ, ಕಾ ಮತ್ತು ಪಾ ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ.
5) ಶ್ರೀ. ಜಡಾವಮಲ್ ಮಾಣಿಕಚಂದ ಟಿಪಿ ನಂ:49 ವಾರ್ಡ ನಂ:10 ರೇಲ್ವೇ ಸ್ಟೇಶನ್ ಬಾಗಲಕೋಟೆ.

ಪೀಠಿಕೆ :

1. ಸ್ಥಾವರ ಸಂಖ್ಯೆ:949 ಶ್ರೀ. ಜಡಾಮಲ ಮಾಣಿಕಚಂದ ಸಾ॥ ಬಾಗಲಕೋಟೆ ಎಲ್.ಟಿ-2(ಎ) ಜಕಾತಿ, ಈ ಸ್ಥಾವರಕ್ಕೆ ದಿನಾಂಕ:24-05-2003 ರಲ್ಲಿ ಅನಧೀಕೃತ ಹೆಚ್ಚಿನ ಭಾರ 2 ಕಿವ್ಯಾ ಎಂದು ಜಾಗೃತದಳ ವಿಜಯಪೂರ ಇವರು ರೂ 13,594/- ಹಿಂಬಾಕಿ ಬಿಲ್ ಸಲ್ಲಿಸಿರುತ್ತಾರೆ. ಗ್ರಾಹಕರು ಬಿಲ್‌ನ 1/4 ಭಾಗ ರೂ 3,400/- ನ್ನು ಪಾವತಿಸಿ 2003ರಲ್ಲಿ ವಿಭಾಗ ಕಚೇರಿಯಲ್ಲಿ ನಡೆಸುತ್ತಿರುವ ಗ್ರಾಹಕರ ಮೇಲ್ಮನವಿಯಲ್ಲಿ ಅಪೀಲ್‌ಗೆ ಹೋಗಿರುತ್ತಾರೆ.

2. ಜುಲೈ-2005 ರಲ್ಲಿ ಲೆಡ್ಜರ್ ಖಾತೆಯಿಂದ ಕಂಪ್ಯೂಟರೈಜೇಶನ್ ಆದಾಗ ಸದರೀ ಗ್ರಾಹಕರ ಖಾತೆಯಲ್ಲಿ ರೂ 10,194/- ಹಿಂಬಾಕಿ ಮೊತ್ತವನ್ನು (ಡಿಸ್‌ಪ್ಯೂಟ್ ಅಪೀಲ್ ಕೇಸ್) ಇಟ್ಟು, ಪ್ರತಿ ತಿಂಗಳು ಕರೆಂಟ್ ಬಿಲ್ಲು ಸಲ್ಲಿಸುತ್ತಿದ್ದು, ಅದರ ಪ್ರಕಾರ ಗ್ರಾಹಕರು ಭರಣಾ ಮಾಡಿರುತ್ತಾರೆ.

3. ಸದರೀ ಡಿಸ್‌ಪ್ಯೂಟ್ ಮೊತ್ತವನ್ನು ರೂ.10,194/- ನ್ನು ಏಪ್ರೀಲ-2017 ನೇ ತಿಂಗಳಲ್ಲಿ ಗ್ರಾಹಕರಿಗೆ ಯಾವುದೇ ಮಾಹಿತಿಯನ್ನು ನೀಡಲಾರದೇ ಗ್ರಾಹಕರ ಕರೆಂಟ್ ಖಾತೆಗೆ ಜಮಾ ಮಾಡಿರುತ್ತಾರೆ. ಬಡ್ಡಿ ಸೇರಿಸಿ ಒಟ್ಟು

ರೂ.19,115=00 ಬೇಡಿಕೆ ಮಾಡಲಾಗಿತ್ತು ಹಾಗೂ ಅದರ ಮೇಲಿನ 1% ಬಡ್ಡಿಯು ಈವರೆಗೆ ಬೇಡಿಕೆಯಾಗಿರುತ್ತದೆ.

4. ಅಗಸ್ಟ್-2022 ನೇ ತಿಂಗಳಲ್ಲಿ ಈ ಸ್ಥಾವರದ ಬಾಕಿ ಮೊತ್ತ ರೂ.37,096=00 ಉಳಿದಿದ್ದು, ಪ್ರತಿ ತಿಂಗಳು ಪ್ರಸ್ತುತ ತಿಂಗಳ ನಿರಂತರವಾಗಿ ಬಿಲ್ಲನ್ನು ಮಾತ್ರ ತುಂಬಿಸಿಕೊಳ್ಳುತ್ತಿರುವರು. (ಡಿಸ್‌ಪ್ಯುಟ್ ಹಾಗೂ ಬಡ್ಡಿಯನ್ನು ಹೊರತುಪಡಿಸಿ)

**<u>ಶ್ರೀ. ಜಡಾಮಲ್ ಮಾಣಿಕಚಂದ ಟಿಪಿ ನಂ:49 ವಾರ್ಡ ನಂ:10 ರೇಲ್ವೇ ಸ್ಟೇಶನ್ ಬಾಗಲಕೋಟೆ ರವರ ದಿನಾಂಕ:21-06-2022 ಸಭೆಯಲ್ಲಿ ಹೇಳಿಕೆ</u> :**

ಗೋಡೌನದಲ್ಲಿ 2 ದಾರಿ ದೀಪಗಳು ಹಾಗೂ ವಾಯರ್‌ಗಳು ಇಡಲಾಗಿತ್ತು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಜಾಗೃತದಳ ಉಪ ವಿಭಾಗ ಬಿಜಾಪುರ ರವರು ದಿನಾಂಕ 24.05.2003ರಂದು ಸ್ಥಾವರ ಸಂಖ್ಯೆ:949 ಕ್ಕೆ ಪರಿಶೀಲನೆ ಮಾಡಲು ಬಂದಾಗ ಸದರ ಸಾಮಗ್ರಿಗಳನ್ನು ನೋಡಿ ಹೆಚ್ಚಿನ ಭಾರ (additional load) ಎಂದು ರೂ. 13,594=00 ದಂಡ ಹಾಕಿ ಬಿಲ್ ನೀಡಿದರು. ಅದರಂತೆ ದಿನಾಂಕ:24-05-2003 ರಂದು ನಾನು 1/4 ಭಾಗ ಬಿಲ್ಲನ್ನು ಅಂದರೆ ರೂ.3400=00 ಪಾವತಿಸಿ ಗ್ರಾಹಕರ ವೇದಿಕೆಗೆ ಅರ್ಜಿ ಸಲ್ಲಿಸಲಾಗಿತ್ತು. ಈ ಕುರಿತು ಇವತ್ತಿನವರೆಗೂ ಯಾವುದೇ ಆದೇಶವಾಗಿರುವದಿಲ್ಲ. ನಂತರ ದಿನಾಂಕ:03.12.2012 ರಂದು ಹಾಗೂ ಬಹಳ ಸಲ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ನಗರ ಉಪ-ವಿಭಾಗ ಬಾಗಲಕೋಟೆ ರವರಿಗೆ ಸರಿಪಡಿಸಲು ಹಾಗೂ ಅಂತಿಮ ಆದೇಶಕ್ಕಾಗಿ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಅದಕ್ಕೆ ಇದೂವರೆಗೂ ಯಾವುದೇ ಉತ್ತರ ನೀಡಿರುವದಿಲ್ಲ. ನನಗೆ ದಂಡದ ಮೊತ್ತ ಹಾಗೂ ಅದರ ಬಡ್ಡಿಯನ್ನು ಮನ್ನಾ ಮಾಡಲು ವಿನಂತಿಸಿದರು.

**<u>ಶ್ರೀ. ಅರವಿಂದ ನಾಯ್ಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಹೆಸ್ಕಾಂ, ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ ರವರು ಸಭೆಗೆ ಹಾಜರಾಗಿರುತ್ತಾರೆ ಹಾಗೂ ಅವರ ದಿನಾಂಕ:21-06-2022 ಸಭೆಯಲ್ಲಿ ಹೇಳಿಕೆ:</u>**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ಉಪ-ವಿಭಾಗ ಹೆಸ್ಕಾಂ ಬಾಗಲಕೋಟೆ ಸದರೀ ಸ್ಥಾವರಕ್ಕೆ ಸಂಬಂದಿಸಿದ ಯಾವುದೇ ದಾಖಲೆಗಳು ಕಛೇರಿಯಲ್ಲಿ ಲಭ್ಯವಿರುವದಿಲ್ಲ ಹಾಗೂ ಸದರೀ ಪ್ರಕರಣ 2003 ನೇ ಸಾಲಿನಲ್ಲಿ ಇರುವದೆಂದು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ಉಪ-ವಿಭಾಗ ಹೆಸ್ಕಾಂ ಬಾಗಲಕೋಟೆ ಹಾಗೂ ಹಿರಿಯ ಸಹಾಯಕಿ ಬಾಗಲಕೋಟೆ ರವರಿಗೆ ಸದರೀ ಸ್ಥಾವರಕ್ಕೆ ಸಂಬಂಧಿಸಿದ ಡಿಸ್‌ಪ್ಯುಟ್ ಮೊತ್ತ ರೂ.10,194=00 ನ್ನು ಯಾವ ತಿಂಗಳಲ್ಲಿ ಗ್ರಾಹಕರ ಖಾತೆಗೆ ಬೇಡಿಕೆ ಮಾಡಿರುವ ಕುರಿತು ವಿವರ ಹಾಗೂ ಅದರ ಮೇಲಿನ ಬಡ್ಡಿ ಆಕರಣೆ ಮಾಡಿದ ವಿವರವಾದ ಮಾಹಿತಿಯೊಂದಿಗೆ ಹಾಗೂ ಜುಲೈ-2022ರ ಅಂತ್ಯದ ವರೆಗೆ ಅಸಲು, ಬಡ್ಡಿಯ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ವೇದಿಕೆಗೆ ಸಲ್ಲಿಸಲು ದಿನಾಂಕ:27-04-2022 ರ ಸಭೆಯಲ್ಲಿ ಸೂಚಿಸಿ ಸಭೆಯನ್ನು ಮುಂದೂಡಲಾಗಿತ್ತು.

ಅದರಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಹೆಸ್ಕಾಂ, ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ ರವರು ಹಿಂದಿನ ಸಭೆಯಲ್ಲಿ ಸೂಚಿಸಿರುವಂತೆ ಕ್ಯಾಲ್ಕುಲೇಶನ್ ಶೀಟ್ ಹಾಗೂ ಕಂಪ್ಯೂಟರ್ ಹಿಸ್ಟ್ರೀ ಶೀಟ್ ಕುರಿತು ಪತ್ರ ಸಂಖ್ಯೆ:710-11 ದಿನಾಂಕ:30-05-2022 ರಡಿಯಲ್ಲಿ ಮಾಹಿತಿಯನ್ನು ಇಂದಿನ ಸಭೆಯ ವೇದಿಕೆಗೆ (ದಿನಾಂಕ:21-06-2022) ಸಲ್ಲಿಸಿದ್ದು,

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಹೆಸ್ಕಾಂ, ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ ರವರಿಗೆ ಸದರೀ ಸ್ಥಾವರದ ಸ್ಥಳ ಪರಿಶೀಲನೆ ಮಾಡಿ ಸವಿಸ್ತಾರವಾದ ವರದಿಯನ್ನು ಮುಂದಿನ ಸಭೆಯಲ್ಲಿ ವೇದಿಕೆಗೆ ಸಲ್ಲಿಸಲು ಸೂಚಿಸಿ, ಸಭೆಯನ್ನು ಮುಂದೂಡಲಾಯಿತು.

**ಶ್ರೀ. ಜಡಾಮಲ್ ಮಾಣಿಕಚಂದ ಟಿಪಿ ನಂ:49 ವಾರ್ಡ ನಂ:10 ರೇಲ್ವೇ ಸ್ಟೇಶನ್ ಬಾಗಲಕೋಟೆ ರವರ ದಿನಾಂಕ:26-07-2022 ಸಭೆಯಲ್ಲಿ ಹೇಳಿಕೆ :**

ಗೋಡೌನದಲ್ಲಿ 2 ದಾರಿ ದೀಪಗಳು ಹಾಗೂ ವಾಯರ್‌ಗಳು ಇಡಲಾಗಿತ್ತು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಜಾಗೃತದಳ ಉಪ ವಿಭಾಗ ಬಿಜಾಪುರ ರವರು ದಿನಾಂಕ 24.05.2003ರಂದು ಸ್ಥಾವರ ಸಂಖ್ಯೆ:949 ಕ್ಕೆ ಪರಿಶೀಲನೆ ಮಾಡಲು ಬಂದಾಗ ಸದರ ಸಾಮಗ್ರಿಗಳನ್ನು ನೋಡಿ ಹೆಚ್ಚಿನ ಭಾರ (additional load) ಎಂದು ರೂ. 13,594=00 ದಂಡ ಹಾಕಿ ಬಿಲ್ ನೀಡಿದರು. ಅದರಂತೆ ದಿನಾಂಕ:24-05-2003 ರಂದು ನಾನು 1/4 ಭಾಗ ಬಿಲ್ಲನ್ನು ಅಂದರೆ ರೂ.3400=00 ಪಾವತಿಸಿ ಗ್ರಾಹಕರ ವೇದಿಕೆಗೆ ಅರ್ಜಿ ಸಲ್ಲಿಸಲಾಗಿತ್ತು. ಈ ಕುರಿತು ಇವರತ್ತಿನವರೆಗೂ ಯಾವುದೇ ಆದೇಶವಾಗಿರುವದಿಲ್ಲ. ನಂತರ ದಿನಾಂಕ:03.12.2012 ರಂದು ಹಾಗೂ ಬಹಳ ಸಲ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ನಗರ ಉಪ-ವಿಭಾಗ ಬಾಗಲಕೋಟೆ ರವರಿಗೆ ಸರಿಪಡಿಸಲು ಹಾಗೂ ಅಂತಿಮ ಆದೇಶಕ್ಕಾಗಿ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಅದಕ್ಕೆ ಇದೂವರೆಗೂ ಯಾವುದೇ ಉತ್ತರ ನೀಡಿರುವದಿಲ್ಲ. ನನಗೆ ದಂಡದ ಮೊತ್ತ ಹಾಗೂ ಅದರ ಬಡ್ಡಿಯನ್ನು ಮನ್ನಾ ಮಾಡಲು ವಿನಂತಿಸಿದರು.

**ಶ್ರೀ. ಅರವಿಂದ ನಾಯ್ಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಹೆಸ್ಕಾಂ, ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ ರವರು ಸಭೆಗೆ ಹಾಜರಾಗಿರುತ್ತಾರೆ ಹಾಗೂ ಅವರ ದಿನಾಂಕ:26-07-2022 ಸಭೆಯಲ್ಲಿ ಹೇಳಿಕೆ:**

ಪ್ರಕರಣ ಸಂಖ್ಯೆ:03/2022 ಶ್ರೀ. ಜಡಾಮಲ ಮಾಣಿಕಚಂದ ಟಿಪಿ ನಂ:49, ವಾರ್ಡ ನಂ:10 ರೇಲ್ವೇ ಸ್ಟೇಶನ್ ಬಾಗಲಕೋಟೆ ರವರ ಸ್ಥಾವರ ಸಂಖ್ಯೆ:949ಗೆ ಸಂಬಂಧಿಸಿದಂತೆ ಈ ಮೂಲಕ ಮಾನ್ಯರಲ್ಲಿ ಟಿಪ್ಪಣಿ .ನೀಡುವದೇನೆಂದರೆ, ಸದರೀ ಗ್ರಾಹಕರ ಸ್ಥಾವರ ಸಂಖ್ಯೆ:949ಗೆ ದಿನಾಂಕ:16-03-1975 ರಿಂದ ವಿದ್ಯುತ್ ಮಂಜೂರಾತಿಯನ್ನು ಪಡೆದಿಕೊಂಡಿರುತ್ತಾರೆ. ದಿನಾಂಕ:24-05-2003ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಜಾಗೃತದಳ ಹುವಿಸಕಂನಿ ವಿಜಯಪೂರ ಇವರು ಅನಿರೀಕ್ಷಿತವಾಗಿ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದಾಗ ಸದರೀ ಗ್ರಾಹಕರು ವಿದ್ಯುತ್ ದುರುಪಯೋಗ ಮಾಡಿರುವದನ್ನು ಪತ್ತೆ ಮಾಡಿದ್ದು, ವಿದ್ಯುತ್ ದುರುಪಯೋಗ ಭಾರ 02 ಕಿವ್ಯಾ ಇರುವದೆಂದು ವರದಿ ನೀಡಿರುತ್ತಾರೆ. ಹಾಗೂ ಹಿಂಬಾಕಿ ಮೊತ್ತ ರೂ. 13,594/- ಅನ್ನು 30 ದಿನಗಳಲ್ಲಿ ಭರಣಾ ಮಾಡಲು ಪತ್ರ ಸಂಖ್ಯೆ:4066-97 ದಿನಾಂಕ:17-07-2003 ರಲ್ಲಿ ಸದರೀ ಗ್ರಾಹಕರಿಗೆ ತಿಳಿಸಿರುತ್ತಾರೆ. ದಿನಾಂಕ:16-08-2003 ರಂದು ಗ್ರಾಹಕರಾದ ಶ್ರೀ. ಜಡಾಮಲ ಮಾಣಿಕಚಂದ ರವರು ಸದರೀ ದಂಡದ ಬಿಲ್ಲಿನ ಮೊತ್ತದಲ್ಲಿ 1/4 ಭಾಗ ಬಿಲ್ ಮೊತ್ತವನ್ನು ಅಂದರೆ ರೂ 3400 ನ್ನು ಪಾವತಿಸಿ ಗ್ರಾಹಕರ ವೇದಿಕೆ ವಿಜಯಪೂರ ಅರ್ಜಿ ಸಲ್ಲಿಸಿರುತ್ತಾರೆ.

ಮುಂದುವರೆದು, ಹೆಸ್ಕಾಂ ನಗರ ಉಪವಿಭಾಗದಲ್ಲಿ 2003 ರಿಂದ 2005 ರವರೆಗೆ ಬಿಲ್ಲಿಂಗ್ ಕಾರ್ಯವನ್ನು ಲೆಡ್ಜರ್ ಮೂಲಕ ನಿರ್ವಹಿಸುತ್ತಿದ್ದು ಹಾಗೂ 2005 ರಲ್ಲಿ ಟಿ.ಆರ್.ಎಮ್ ಎನ್-ಸಾಫ್ಟ್ ತಂತ್ರಾಂಶದಲ್ಲಿ ಮತ್ತು 2010 ರಿಂದ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದ್ದು, ಏಪ್ರೀಲ-2017 ರಲ್ಲಿ ಸ್ಥಾವರ ಸಂಖ್ಯೆ:949 ಕ್ಕೆ ಹಿಂಬಾಕಿ ಮೊತ್ತ ರೂ 19,115/- ಮತ್ತು ಹಿಂದಿನ ತಿಂಗಳ ಬಾಕಿ ಮೊತ್ತ ರೂ 4436/- ತಿಂಗಳ ಬೇಡಿಕೆ ಮೊತ್ತ ರೂ.50/- ಒಟ್ಟು 23,761/- ಅಂತ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ಆಕರಣೆ ಆಗಿರುತ್ತದೆ.

ಮುಂದುವರೆದು, ಮಾನ್ಯರ ಆದೇಶ ಪತ್ರ ಸಂಖ್ಯೆ:3393-3397 ದಿನಾಂಕ:29-06-2022 ರನ್ವಯ ದಿನಾಂಕ:08-07-2022 ರಂದು ಶಾಖಾಧಿಕಾರಿ ಕಾ ಮತ್ತು ಪಾ ನಗರ ಶಾಖೆ ರವರ ಜೊತೆಗೂಡಿ ಸ್ಥಾವರ ಸಂಖ್ಯೆ:949 ಸ್ಥಳ ಪರಿಶೀಲನಾ ವರದಿಯನ್ನು ಹಾಗೂ ಗ್ರಾಹಕರ ಬೇಡಿಕೆ ಹಿಂಬಾಕಿ ಮೊತ್ತದ ವಿಶ್ಲೇಷಣಾ ವಿವರ ಪಟ್ಟಿಯನ್ನು ಮತ್ತು ಸದರೀ ಸ್ಥಾವರದ 2010 ರಿಂದ ಜುಲೈ-2022 ರವರೆಗಿನ ಹಿಸ್ಟರಿ ಶೀಟ್ ಲಗತ್ತಿಸಿ ದಿನಾಂಕ:26-07-2022 ಸಮಯ 10.30 ಕ್ಕೆ ಅಧೀಕ್ಷಕ ಅಭಿಯಂತರರು(ವಿ) ಬಾಗಲಕೋಟೆ ಹಾಗೂ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ಕಾ ಮತ್ತು ಪಾ ವೃತ್ತ ಕಚೇರಿ ಹೆಸ್ಕಾಂ ಬಾಗಲಕೋಟೆ ರವರಲ್ಲಿ ಸಲ್ಲಿಸಲಾಗಿದೆ ಎಂದು ತಿಳಿಸಿರುವರು.

1. ರೂ. 10,194/- ಡಿಸ್ ಪ್ಯುಟ್ ಮೊತ್ತ
2. ಏಪ್ರೀಲ-2017 ರಲ್ಲಿ ಡಿಸ್ ಪ್ಯುಟ್ ಮೊತ್ತ ರೂ.10,194/- ಹಾಗೂ ಇದರ ಮೇಲಿನ ಬಡ್ಡಿ (2012 ರಿಂದ 2017 ರವರೆಗೆ) ಲೆಕ್ಕ ಮಾಡಿ ರೂ 8,921/- ಸೇರಿಸಿ ಒಟ್ಟು ರೂ 19,115/- ಮೊತ್ತವನ್ನು ಏಪ್ರೀಲ-2017 ರಲ್ಲಿ ಬೇಡಿಕೆ ಮಾಡಲಾಗಿರುತ್ತದೆ.
3. ರೂ. 19,115/- ಮೊತ್ತದ ಮೇಲೆ ಶೇ. 1% ರಂತೆ ಬಡ್ಡಿ ಅಗಸ್ಟ್-2022 ರವರೆಗೆ ಆಕರಣೆಯಾಗಿದ್ದು, ಏಪ್ರೀಲ-2017 ರಿಂದ ಅಗಸ್ಟ್-2022 ರವರೆಗೆ 66 ತಿಂಗಳ ಬಡ್ಡಿ ರೂ.19,115*1% ಬಡ್ಡಿ=191*66=12,606/- ಆಕರಣೆಯಾಗಿರುತ್ತದೆ.
4. ಒಟ್ಟು ಬಡ್ಡಿ ಆಕರಣೆ ಆಗಿದ್ದು, ರೂ. 8921+12606=21,527/-

| | |
|---|---|
| ಅಗಸ್ಟ್-2022 ರ ಅಂತ್ಯಕ್ಕೆ ಬಾಕಿ | 37096=00 |
| ಡಿಸ್ ಪ್ಯುಟ್ ಮೊತ್ತ | 10194=00 |
| ಡಿಸ್ ಪ್ಯುಟ್ ಮೊತ್ತದ ಮೇಲೆ ಬಡ್ಡಿ (2012 ಅಗಸ್ಟ್-2022 ರವರೆಗೆ) | 21527=00 |
| ಗ್ರಾಹಕರು ತುಂಬಬೇಕಾಗಿದ್ದ ಮೊತ್ತ | 5375=00 |

ಸ್ಥಾವರ ಸಂಖ್ಯೆ:949 ರ ಹಿಸ್ಟ್ರೀ ಶೀಟ್‌ನ್ನು ಪರಿಶೀಲಿಸಲಾಗಿ, ಹಾಗೂ ಈ ಹಿಂಬಾಕಿ ಬಿಲ್ಲು ರೂ10,190=00 (1/4 ಮೊತ್ತ 3400/- ಭರಣಾ ಮಾಡಿರುವದನ್ನು ಹೊರತುಪಡಿಸಿ) ಅಗಸ್ಟ್-2003 ರಲ್ಲಿ ಬಿಬಿಸಿ ಆಗಿದ್ದು, ಇದಕ್ಕೆ ಸಂಬಂಧಿಸಿದ ಕಡತ/ಜಾಗೃತ ದಳ ವರದಿ/ ಪಂಚನಾಮ ಪ್ರತಿ/ ಲೆಡ್ಜರ್ ಎಕ್ಸ್ಟ್ರ್ಯಾಕ್ಟ್ ವರದಿ ಎಮ್‌ಆರ್‌ಟಿ ವರದಿ ಯಾವದು ದಾಖಲೆಗಳು ಇರದ ಕಾರಣ ಈವರೆಗೂ ಯಾವುದೇ ತೀರ್ಮಾನವಾಗದ ಕಾರಣ ತೀರ್ಮಾನವಾಗದೇ ಯಾವುದೇ ಸೂಚನೆ ನೀಡದೇ ಗ್ರಾಹಕರ ಖಾತೆಗೆ ಬೇಡಿಕೆ ಮಾಡಿರುವದನ್ನು ಗಣನೆಗೆ ತೆಗೆದುಕೊಂಡು ಈ ಕೆಳಗಿನಂತೆ ಆದೇಶಿಸಿದೆ.

## ಆ ದೇ ಶ

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2022-23/ 6013-6017 ದಿನಾಂಕ 26 AUG 2022

ಮೇಲಿನ ಎಲ್ಲ ಅಂಶಗಳನ್ನು ಕುಲಂಕೂಷವಾಗಿ ಪರಿಶೀಲಿಸಲಾಯಿತು. ಗ್ರಾಹಕರು ಜಾಗೃತದಳ ಹಿಂಬಾಕಿ ಮೊತ್ತ ರೂ,10,194=00 ಹಾಗೂ ಗ್ರಾಹಕರು ಭರಣಾ ಮಾಡಬೇಕಾದ ಬಾಕಿ ಮೊತ್ತ ರೂ,5,375=00 ಒಟ್ಟು ಮೊತ್ತ ರೂ,15,569=00 ನ್ನು (ಹದಿನೈದು ಸಾವಿರದ ಐದು ನೂರಾ ಅರವತ್ತೊಂಬತ್ತು ರೂಪಾಯಿ) ಪಾವತಿಸಲು ಈ ಮೂಲಕ ಆದೇಶಿಸಲಾಗಿದೆ.

ಗ್ರಾಹಕರಿಗೆ ಎರಡು ಕಂತುಗಳಲ್ಲಿ ಸದರೀ ಮೊತ್ತವನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಹಿಂಬಾಕಿ ಮೊತ್ತದ ಮೇಲೆ ಆಕರಣೆ ಮಾಡಿದ ಬಡ್ಡಿ ಮೊತ್ತ ರೂ,21,527=00 (ಇಪ್ಪತ್ತೊಂದು ಸಾವಿರದ ಐದು ನೂರಾ ಇಪ್ಪತ್ತೇಳು ರೂಪಾಯಿ)ಗಳನ್ನು ಹಿಂಪಡೆಯಲು ಆದೇಶಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಶ್ರೀ ನಾರಾಯಣ ಕಳ್ಳಿಮನಿ
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟೆ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟೆ.

ಅಧ್ಯಕ್ಷರು,
(ಕಾಶೀನಾಥ.ಜಿ ಹಿರೇಮಠ)
ಅಧೀಕ್ಷಕ ಅಭಿಯಂತರರು(ವಿ) ಬಾಗಲಕೋಟೆ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟೆ

ಪ್ರತಿಯನ್ನು:
1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ. .
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ನಗರ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
5) ಶ್ರೀ. ಜಡಾಮಲ್ ಮಾಣಿಕಚಂದ ಟಿಪಿ ನಂ:49 ವಾರ್ಡ ನಂ:10 ರೇಲ್ವೇ ಸ್ಟೇಶನ್ ಬಾಗಲಕೋಟೆ. ಮೋಬೈಲ್ ಸಂಖ್ಯೆ:8904690411

ಕಛೇರಿ ಪ್ರತಿ/ಪ್ರಧಾನ ಕಡತ.